**ದಿನಾಂಕ 27 -11-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

ಮುಂದುವರೆದ ಪಾಟೀ ಸವಾಲುಃ ಶ್ರೀವೈ.ಹೆಚ್.ಕೆ., ಆರೋಪಿ ಪರ ವಕೀಲರಿಂದಃ

ನಿಮ್ಮ ಮುಖ್ಯ ವಿಚಾರಣೆಯ ಪ್ಯಾರಾ ನಂ, 2 ರಲ್ಲಿ ರೂ. 4,25,000/- ಬಾಕಿ ಇರುತ್ತದೆ ಅಂತಾ ತಿಳಿಸಿದ್ದು ಆ ಪ್ರಕಾರ ದಾಖಲಾತಿಗಳನ್ನು ಹಾಜರಪಡಿಸಿದ್ದೀರಾ ಅಂದರೆ ಹಾಜರಪಡಿಸುತ್ತೇನೆ ಅಂತಾ ಸಾಕ್ಷ್ಯ ನುಡಿಯುತ್ತಾರೆ. ಇಲ್ಲಿಯವರೆಗೂ ಆ ಕುರಿತು ಯಾವುದೇ ದಾಖಲೆಗಳನ್ನು ಮಾನ್ಯ ನ್ಯಾಯಾಲಯಕ್ಕೆ ಹಾಜರಪಡಿಸಿರುವುದಿಲ್ಲ ಅಂದರೆ ಹಾಜರು ಮಾಡುತ್ತೇನೆ. ಕದರಮಂಡಲಗಿ 5 ರಿಂದ 6 ಜನರ ಜೊತೆ ವ್ಯವಹಾರ ಮಾಡಿದ್ದು ಅವರ ಎಲ್ಲರ ಮೇಲೆ ಪ್ರಕರಣ ದಾಖಲಿಸಿರುತ್ತೀರಿ ಅಂದರೆ ಹೌದು. ನಿಮ್ಮ ಬ್ಯಾಂಕಿನವರಿಗೆ ಆರೋಪಿಗೆ ಮಾಹಿತಿ ಕೊಟ್ಟಿರುತ್ತೀರಾ ಅಂದರೆ ಕೊಟ್ಟಿರುತ್ತೇನೆ. ಆರೋಪಿ ಚೆಕ್ ಕೊಟ್ಟಾಗ ಮಾಹಿತಿ ಕೊಟ್ಟಿರುತ್ತೇನೆ. ಆರೋಪಿ ಚೆಕ್ ಕೊಟ್ಟಾಗ ಮಾಹಿತಿ ಕೊಟ್ಟಿರುತ್ತೇನೆ ಅಂತಾ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ. ನಿಪಿ-1 ರ ಚೆಕ್ ಮೇಲೆ ಇರುವ ಬರವಣಿಗೆಗೂ ಹಾಗೂ ಸಹಿಗೂ ಆರೋಪಿಯದು ಅಲ್ಲಾ ಅಂದರೆ ಸಾಕ್ಷಿ ಅವರೇ ಬರೆದುಕೊಟ್ಟಿರುತ್ತಾರೆ ಅಂತಾ ಹೇಳುತ್ತಾರೆ. ಅದರ ಬಗ್ಗೆ ಮಾಹಿತಿ ಇದೆಯೇ ಅಂದರೆ ಆರೋಪಿಯೇ ಬರೆದು ಕೊಟ್ಟಿರುತ್ತಾರೆ. ಆರೋಪಿ ಜೊತೆ ಬಂದಿದ್ದವರು ಬರೆದು ಹಾಕಿರುತ್ತಾರೆ ಅಂತಾ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ. ಪ್ರತಿ ವರ್ಷ ನನ್ನ ಅದಾಯದ ಬಗ್ಗೆ ತೆರಿಗೆ ಪಾವತಿ ಮಾಡುತ್ತೇನೆ. ದೀಪಾ ಏಜೆನ್ಸಿಯ ಬಗ್ಗೆ ಆದಾಯ ತೆರಿಗೆ ಪಾವತಿ ಮಾಡುತ್ತೇನೆ. ಆದಾಯ ತೆರಿಗೆ ಪಾವತಿಯಲ್ಲಿ ರೂ. 4,25,000/- ಗಳು ಬರುವುದು ಇರುತ್ತದೆ ಅಂತಾ ತೋರಿಸಿರುತ್ತೀರಾ ಅಂದರೆ ತೋರಿಸಿರುತ್ತೇನೆ. ಆ ಎಲ್ಲ ದಾಖಲೆಗಳನ್ನು ಹಾಜರುಮಾಡುತ್ತೀರಾ ಅಂದರೆ ಹಾಜರುಪಡಿಸುತ್ತೇನೆ. ಆರೋಪಿ ಜೊತೆ ವ್ಯವಹಾರ ಮಾಡುವಾಗ ಕ್ಯಾಶ ರಸೀದಿ ಮತ್ತು ಉದ್ರಿ ರಸೀದಿಯ ಬಗ್ಗೆ ಹಾಜರಪಡಿಸುತ್ತೀರಾ ಅಂದರೆ ಹಾಜರು ಮಾಡುತ್ತೇನೆ. ನಿಡಿ-21 ರ ಪ್ರಕಾರ ದಿನಾಂಕಃ 17-09-2012 ರಂದು ರೂ. 12,265/- ಬಾಕಿ ಇದ್ದು ಆ ಹಣವನ್ನು ಮರು ಪಾವತಿ ಮಾಡಿದ್ದು ತದನಂತರದಲ್ಲಿ ಯಾವುದೇ ವ್ಯವಹಾರ ಇರುವುದಿಲ್ಲ ಅಂದರೆ ಸಾಕ್ಷಿ ತದನಂತರದಲ್ಲಿ ವ್ಯವಹಾರ ಆಗಿದ್ದು ಆ

ದಾಖಲೆಗಳನ್ನು ಹಾಜರಪಡಿಸುತ್ತೇನೆ. ಬಾಕಿ ಇದ್ದ ಹಣ ರೂ. 12265/- ಗಳನ್ನು ಪಾವತಿಸಿದ ನಂತರ ಭದ್ರತೆಗಾಗಿ ನೀಡಿದ ಚೆಕ್‌ನ್ನು ಕೊಡು ಅಂತಾ ಆರೋಪಿ ಕೇಳಿದಾಗ ನೀವು ಕೊಟ್ಟಿರುವುದಿಲ್ಲ. ರೈತರು ಭದ್ರತೆಗಾಗಿ ಹಾಗೂ ವಿಶ್ವಾಸದಿಂದ ನೀಡಿದ ಚೆಕ್‌ನ್ನು ಹಣ ಹಿಂತಿರುಗಿಸಿದ್ದರು ಕೂಡಾ ವಾಪಸ್ಸು ನೀಡದೇ ದುರುಪಯೋಗ ಪಡಿಸಿಕೊಂಡಿರುತ್ತೀರಿ ಅಂದರೆ ಸರಿಯಲ್ಲ. ನೀವು ನೀಡಿದ ನೋಟಿಸ್ ಆರೋಪಿಗೆ ತಲುಪಿರುವುದಿಲ್ಲ ನಿಪಿ-2 ಮತ್ತು ನಿಪಿ-3 ರಲ್ಲಿರುವ ಸಹಿ ಆರೋಪಿಯದು ಅಲ್ಲಾ ಅಂದರೆ ಸರಿಯಲ್ಲ. ನಿಪಿ-5 ರಲ್ಲಿರುವ ಸಹಿ ಆರೋಪಿಯದು ಇರುವುದಿಲ್ಲ ಅಂದರೆ ಸರಿಯಲ್ಲ. ಹೀಗಾಗಿ ನೀವು ಕಾನೂನುಬದ್ಧವಾಗಿ ಆರೋಪಿಗೆ ಯಾವುದೇ ನೋಟಿಸ್ ನೀಡಿರುವುದಿಲ್ಲ ಅಂದರೆ ಸರಿಯಲ್ಲ. ಆರೋಪಿ ಭದ್ರತೆಗಾಗಿ ನೀಡಿದ ಚೆಕ್‌ನ್ನು ಹಣ ಯಾವುದೇ ಬಾಕಿ ಇಲ್ಲದೇ ಇದ್ದರೂ ಕೂಡಾ ಸುಳ್ಳು ಪ್ರಕರಣ ದಾಖಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಿ ಅಂದರೆ ಸರಿಯಲ್ಲ. ಆರೋಪಿ ನಿಮಗೆ ಕೊಡಬೇಕಾದ ಎಲ್ಲಾ ಹಣವನ್ನು ಹಿಂದಿರುಗಿಸಿದ ನಂತರ ಚೆಕ್‌ನ್ನು ಕೊಡು ಅಂತಾ ಕೇಳಿದಾಗ, ಚೆಕ್ ಕಳೆದಿರುತ್ತದೆ ಮತ್ತು ನಂತರ ನೀಡುತ್ತೇನೆ ಅಂತಾ ಹೇಳಿ ದುರುಪಯೋಗಪಡಿಸಿಕೊಂಡು ಈ ಪ್ರಕರಣ ದಾಖಲಿಸಿರುತ್ತೀರಿ ಅಂದರೆ ಸರಿಯಲ್ಲ. ನಿಪಿ-1 ರ ಚೆಕ್‌ನ್ನು 2003-2024 ರಲ್ಲಿ ವ್ಯವಹಾರ ಮಾಡುವ ಸಂದರ್ಭದಲ್ಲಿ ನೀಡಿದ ಚೆಕ ಆಗಿರುತ್ತದೆ ಅಂದರೆ ಸರಿ.

ಮರು ವಿಚಾರಣೆ ಇರುವುದಿಲ್ಲ.
(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸರಿ ಇದೆ.

-ಸಹಿ- 27-11-2024
ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ. ಹಾವೇರಿ.